7. ಶ್ರೀ. ವಿ. ರವಿಚಂದರ್ - "
8. ಶ್ರೀ. ಎಂ.ಕೆ. ರಾಮಚಂದ್ರ - "
9. ಶ್ರೀ. ಕೆ. ಕೃಷ್ಣಕುಮಾರ್ - "
10. ಶ್ರೀ. ಕೆ. ಜೈರಾಜ್ - "
11. ಶ್ರೀ. ಟಿ. ಜಕಾರಿಯಾ - "
12. ಶ್ರೀ. ನಿರಂಜನ್ ಆಳ್ವ - "
13. ಶ್ರೀ. ರಮೇಶ್ ರಾಮನಾಥನ್ - "
14. ಶ್ರಿಮತಿ. ಕಲ್ಪನಾಕರ್ - "

(ಇ) ಎರಡು ಬಾರಿ ಸಭೆ ಸೇರಿ ಬೆಂಗಳೂರಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದೆ. ಯಾವುದೇ ಸ್ಥಳಕ್ಕೆ ಸಮಿತಿ ಭೇಟಿ ನೀಡಿಲ್ಲ.

(ಈ) ನಾಗರೀಕ ಸೌಲಭ್ಯಗಳನ್ನು ಉತ್ತಮಗೊಳಿಸುವುದು. ಅಭಿವೃದ್ಧಿ ಕಾರ್ಯಗಳಿಗಾಗಿ ಆದಾಯದ ಮೂಲಗಳನ್ನು ಸೃಷ್ಟಿಸುವುದು. ಸಾರ್ವಜನಿಕ ಸಂಸ್ಥೆಗಳನ್ನು ಹಾಗೂ ಕೈಗಾರಿಕೋದ್ಯಮಗಳನ್ನು ತೊಡಗಿಸಿಕೊಂಡು ಯೋಜನಾ ಬದ್ಧವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಾಗರೀಕರ ಜೀವನ ಮಟ್ಟವನ್ನು ಸುಧಾರಿಸುವುದು, ಇತ್ಯಾದಿ.

(ಉ) ಹೌದು.

(ಊ) ಪ್ರಶ್ನೆ (ಈ)ಗೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ರೂಪಿಸಿರುವ ಕಾರ್ಯಕ್ರಗಳನ್ನು ಕಾರ್ಯಗತಗೊಳಿಸಲು 7 (ಇಲಾಖೆಗಳ) ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧ ಪಟ್ಟಂತೆ ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ.

ಬೆಂಗಳೂರು ನಗರದಲ್ಲಿ ಒಳಚರಂಡಿ ಶುದ್ಧೀಕರಣ ಕಾರ್ಯಗಾರದ ಬಗ್ಗೆ

1835 (2561) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರಕ್ಕೆ ಒಳಚರಂಡಿ ಶುದ್ಧೀಕರಣ ಮಾಡುವ ಎರಡು ಕಾರ್ಯಗಾರಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪೈಕಿ ಕೋರಮಂಗಲ: ಚಲ್ಲಘಟ್ಟ ಕಣಿವೆಯಲ್ಲಿ ಇರುವ ಒಳಚರಂಡಿ ಕಾರ್ಯಗಾರ ಸಾಮರ್ಥ್ಯದ ಸಾಲದೆ ಒಳಚರಂಡಿ ನೀರನ್ನು ನೇರವಾಗಿ ಬಳಂದೂರು ಕೆರೆಗೆ ಬಿಡುತ್ತಿರುವುದರಿಂದ ಸದರಿ ಕೆರೆ ನೀರು ಕುಡಿಯಲು ಬಟ್ಟೆ ಒಗೆಯಲು, ಮೀನು ಸಾಗಣೆ ಮಾಡಲು ಮತ್ತು ವ್ಯವಸಾಯಕ್ಕೆ ಉಪಯೋಗಿಸಲು ಅಸಮರ್ಥವಾಗಿದ್ದು ಸೊಳ್ಳೆಗಳ ತಯಾರಿಕಾ ಕೇಂದ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಯಾವ ಕ್ರಮ ಕೈಗೊಳ್ಳುವುದು?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಬಂದಿದೆ.

(ಆ) ಬಂದಿದೆ.

(ಇ) ಕೋರಮಂಗಲ-ಚಲ್ಲಘಟ್ಟ ಕಣಿವೆಯಲ್ಲಿ ಈಗ 163 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ದ್ವಿತೀಯ ಹಂತದ ಕೊಳಚೆ ನೀರು ಸಂಸ್ಕರಣ ಘಟಕ ಕಾರ್ಯ ನಿರ್ವಹಿಸುತ್ತಿದೆ. ಈ ಘಟಕಕ್ಕೆ ಪ್ರಸ್ತುತ 163 ದಶಲಕ್ಷ ಲೀಟರ್ ದಿನಂಪ್ರತಿ ವಿನ್ಯಾಸ ಸಾಮರ್ಥ್ಯದ ಎದುರಾಗಿ 100 ರಿಂದ 110 ದಶಲಕ್ಷ ಲೀಟರ್ ದಿನಂಪ್ರತಿಯಷ್ಟು ಕೊಳಚೆ ನೀರು ಹರಿದು ಬರುತ್ತಿದೆ. ಈ ಘಟಕವು ಈಗ ಹರಿದು ಬರುತ್ತಿರುವ ಕೊಳಚೆ ನೀರನ್ನು ಸಮರ್ಪಕ ರೀತಿಯಲ್ಲಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ನಿಗದಿ ಪಡಿಸಿರುವ ಪರಿಮಿತಿಯಲ್ಲಿ ಸಂಸ್ಕರಣೆ ಮಾಡುತ್ತಿದೆ. ಸಂಸ್ಕರಿಸಿದ ಕೊಳಚೆ ನೀರು ಕೆಳದಂಡೆಯಲ್ಲಿರುವ ಬಳ್ಳಂದೂರು ಕೆರೆಯನ್ನು ಸೇರುತ್ತಿದೆ. ಈ ಪ್ರದೇಶದ ಸುತ್ತ ಮುತ್ತಲು ಇರುವ ಕೊಳಚೆ ಪ್ರದೇಶಗಳಲ್ಲಿ ಮತ್ತು ಒಳ ಚರಂಡಿ ವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು ಹಾಗೂ ಕೆಲವು ಕಡೆ ಒಳಚರಂಡಿ ವ್ಯವಸ್ಥೆಯು ಹಾನಿಯುಂಟಾಗಿರುವ ಕಾರಣದಿಂದ ಕೊಳಚೆ ನೀರು ಹರಿಯುವ ಕಾಲುವೆಗಳಲ್ಲಿ ಹರಿದು ಸಂಸ್ಕರಣೆ ಘಟಕವನ್ನು ತಲುಪದೇ ನೇರವಾಗಿ ಬಳ್ಳಂದೂರು ಕೆರೆಯನ್ನು ಸೇರಿ ಕೆರೆಯ ನೀರು ಕಲುಷಿತಗೊಂಡಿದೆ. ತೆರೆದ ಮಳೆ ನೀರು ಹರಿಯುವ ಕಾಲುವೆಗಳಲ್ಲಿ ಹರಿಯುತ್ತಿರುವ ಕೊಳಚೆ ನೀರನ್ನು ಸಂಸ್ಕರಣೆ ಘಟಕಕ್ಕೆ ಹರಿಯ ಬಿಡುವಂತೆ ಮಾಡುವ ಕೆಲಸಗಳನ್ನು ಮಂಡಲಿಯು ಹಂತಹಂತವಾಗಿ ತೆಗೆದುಕೊಳ್ಳುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳು.

1837 (2284) ಶ್ರೀ ಮುದ್ದಹನುಮೇಗೌಡ ಎಸ್.ಪಿ. (ಕುಣಿಗಲ್):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಆ) ಈ ವೈಕಿ ಎಷ್ಟು ಕಾರ್ಖಾನೆಗಳು ಆರ್ಥಿಕವಾಗಿ ಸದೃಢವಾಗಿವೆ; ಹಾಗೂ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಇ) ತೊಂದರೆಯಲ್ಲಿರುವ ಕಾರ್ಖಾನೆಗಳನ್ನು ಸದೃಢಗೊಳಿಸಲು ಸರ್ಕಾರ ವಿಶೇಷ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದೆಯೇ?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಮಹೋದ್ಯಮದ ವ್ಯಾಪ್ತಿಯಲ್ಲಿ 78 ಸಾರ್ವಜನಿಕ ಉದ್ದಿಮೆಗಳು ಇರುತ್ತವೆ.